



ಸುರಂಗ ಮಾರ್ಗದ ಪ್ರವೇಶವನ್ನು ಕಲಾಕೃತಿಗಳ ಮೂಲಕ ಆಕರ್ಷಕಗೊಳಿಸಿರುವುದು



## ಅಂಕಿ ಅಂಶ

**51.38** ಕಿ.ಮೀ.
ಬೈರಾಬಿ– ಸೈರಾಂಗ್ ರೈಲು ಮಾರ್ಗದ ಉದ್ದ

**₹8,071** ಕೋಟಿ
ಕಾಮಗಾರಿ ವೆಚ್ಚ


**48**
ಸುರಂಗ ಮಾರ್ಗಗಳು

**55**
ದೊಡ್ಡ ಸೇತುವೆಗಳು

**88**
ಸಣ್ಣ ಸೇತುವೆ

**114** ಮೀಟರ್
ಅತಿ ಎತ್ತರದ ಸೇತುವೆ

**1.86** ಕಿ.ಮೀ.
ಅತಿ ಉದ್ದದ ಒಂದು ಸುರಂಗ ಮಾರ್ಗ





ಸೈರಾಂಗ್–ಬೈರಾಬಿ ನಡುವಿನ ರೈಲು ಮಾರ್ಗದಲ್ಲಿರುವ ಸುರಂಗ

ಭಾರತದ ಅತಿ ಸಣ್ಣ ಐದು ರಾಜ್ಯಗಳಲ್ಲಿ ಮಿಜೋರಾಂ ಒಂದು (ಗೋವಾ, ಸಿಕ್ಕಿಂ, ತ್ರಿಪುರ, ನಾಗಾಲ್ಯಾಂಡ್ ಇತರ ಸಣ್ಣ ರಾಜ್ಯಗಳು). ಇಲ್ಲಿನ ಜನಸಂಖ್ಯೆ 2011ರ ಜನಗಣತಿ ಪ್ರಕಾರ 10 ಲಕ್ಷ. ಕರ್ನಾಟಕದ ಜಿಲ್ಲೆಗಳಲ್ಲಿ (ಕೊಡಗು ಹೊರತುಪಡಿಸಿ) ಮಿಜೋರಾಂಗಿಂತ ಹೆಚ್ಚು ಜನಸಂಖ್ಯೆ ಇದೆ. ಕೃಷಿ ಮತ್ತು ಸರ್ಕಾರಿ ಉದ್ಯೋಗವೇ ಇಲ್ಲಿನ ಪ್ರಮುಖ ಉದ್ಯೋಗ ಕ್ಷೇತ್ರ. ಟೆಕ್ಸ್‌ಟೈಲ್, ಕೈಮಗ್ಗ ತರಹದ ಸಣ್ಣ ಸಣ್ಣ ಕೆಲವು ಕೈಗಾರಿಕೆಗಳು ಬಿಟ್ಟರೆ ಹೇಳಿಕೊಳ್ಳುವಂಥ ಕೈಗಾರಿಕೆಗಳೂ ಇಲ್ಲ. ನೀರು, ಮಣ್ಣು, ಮರಗಳನ್ನು ಹೊರತುಪಡಿಸಿ ಕೈಗಾರಿಕೆಗಳಿಗೆ ಬೇಕಾದ ಇತರ ಸೌಕರ್ಯಗಳು ಮಿಜೋರಾಂನಲ್ಲಿಲ್ಲ. ವಿದ್ಯುತ್, ಕಚ್ಚಾ ವಸ್ತುಗಳು ಅಸ್ಸಾಂನಿಂದ ಪೂರೈಕೆಯಾಗುತ್ತಿವೆ. ರೈಲು ಸಂಪರ್ಕದಿಂದಾಗಿ ದೇಶದ ಎಲ್ಲ ಕಡೆಯಿಂದ ಹೂಡಿಕೆ ಹರಿದುಬರಲಿದೆ, ಉದ್ಯೋಗ ಸೃಷ್ಟಿಯಾಗಲಿದೆ, ಸಂಪತ್ತು ಹೆಚ್ಚಲಿದೆ. ಜನರ ಕೈಯಲ್ಲಿ ಹಣ ಓಡಾಡಲಿದೆ ಎಂಬ ಕನಸು ಅವರದ್ದು.

ಐಜ್ವಾಲ್‌ನಿಂದ 31 ಕಿ.ಮೀ. ದೂರದ ಲೆಂಗ್‌ಪುಯಿಯಲ್ಲಿ 1997ರಲ್ಲಿ ವಿಮಾನ ನಿಲ್ದಾಣ ನಿರ್ಮಾಣಗೊಂಡಿದೆ. ರಾಜ್ಯ ಸರ್ಕಾರವೇ ನಿರ್ಮಿಸಿದ ದೇಶದ ಮೊದಲ ವಿಮಾನ ನಿಲ್ದಾಣ ಎಂಬ ಹೆಸರು ಈ ನಿಲ್ದಾಣಕ್ಕಿದೆ. ಅಲ್ಲದೇ ಅತಿ ಕಡಿಮೆ ಅವಧಿಯಲ್ಲಿ (2 ವರ್ಷಗಳಲ್ಲಿ) ನಿರ್ಮಾಣಗೊಂಡ ವಿಮಾನ ನಿಲ್ದಾಣ ಎಂಬ ಶ್ರೇಯಸ್ಸನ್ನು ಕೂಡ ಈ ನಿಲ್ದಾಣ ಹೊಂದಿದೆ.

‘ನಮ್ಮ ಜನರು ಶ್ರಮದ ಮೇಲೆ ನಂಬಿಕೆ ಇಟ್ಟವರು ಹಾಗಾಗಿ



ಹೊಸ ರೈಲು ಮಾರ್ಗದಲ್ಲಿ ಸಂಚರಿಸುತ್ತಿರುವ ಮಿಜೋ ಯುವತಿ ತನ್ಮಯವಾಗಿ ಪ್ರಕೃತಿಯನ್ನು ವೀಕ್ಷಿಸುತ್ತಿರುವುದು